ದೊಡ್ಡರಿಸ್ಕು. ಯಾವ ಟೆಂಪೋದವರೂ ಬರುವುದಿಲ್ಲ'' ಅಂದ ಅಲ್ಲೊಬ್ಬ. ''ದನ ಸಾಗಾಟ ಮಾಡಿ ಸಿಕ್ಕಿಬಿದ್ರೆ ಟೆಂಪೋ ಗುದ್ದಿ ಪುಡಿ ಮಾಡ್ತಾರೆ. ಬೆನ್ನುಮೂಳೆ ಮುರಿಯುತ್ತಾರೆ. ನೀವು ಪೇಪರ್ ಓದುವುದಿಲ್ಲವಾ?'' ಎಂದ ಇನ್ನೊಬ್ಬಾತ. ಇದಕ್ಕೆ ಅಬ್ದುಲ್ಲಾನೆ ಸರಿ ಎಂದುಕೊಳ್ಳುತ್ತ ಮನೆಗೆ ವಾಪಸಾದರು. ಅಲ್ಲಿ ಅಬ್ದುಲ್ಲ ಕಾಯುತ್ತ ಕುಳಿತಿದ್ದ. ''ಅಮ್ಮ ಎಲ್ಲ ವಿಷಯ ಹೇಳಿದರು. ಆಗಿನಿಂದ ಏನು ಮಾಡೋಣ ಅಂತ ಯೋಚಿಸುತ್ತಲೇ ಇದ್ದೇನೆ'' ಎಂದನಾತ.

''ನನಗೆ ಒಂದು ದಾರಿ ತೋರಿಸಪ್ಪ. ಮಗಳ ಹೆರಿಗೆಗೆ ನಮಗೆ ದುಬೈಗೆ ಹೋಗಬೇಕು. ಮನೆಯಲ್ಲಿರುವ ದನವನ್ನು ಯಾರಿಗಾದರೂ ಒಪ್ಪಿಸಿ ಹೋಗಬೇಕು. ಊರವರೆಲ್ಲ ಗಬ್ಬದ ದನ, ನಮಗೇ ಹುಷಾರಿಲ್ಲ, ನೋಡಿಕೊಳ್ಳುವವರಿಲ್ಲ, ಕೊಟ್ಟಿಗೆ ಇಲ್ಲ, ಕೊಟ್ಟಿಗೆಗೆ ಬೀಗ ಇಲ್ಲ, ಕಳ್ಳರಿಗೆ ಹೆದರಿ ಇದ್ದ ಜಾನುವಾರುಗಳನ್ನೇ ಮಾರಿದ್ದೇವೆ – ಹೀಗೆ ಹಿಂದೇಟು ಹಾಕುತ್ತಿದ್ದಾರೆ. ನನ್ನ ಹೆಂಡತಿಯ ತಂಗಿ ಕುಂದಾಪುರದವಳು ''ನಾವು ಕಾರು ಹೊರಗಿಡುತ್ತೇವೆ. ಗ್ಯಾರೇಜಿನಲ್ಲಿ ಗೂಟ ಹಾಕಿದರಾಯಿತು. ಇಲ್ಲಿ ತಂದು ಕಟ್ಟಿ, ನೀವು ಹೋಗಿ ಬನ್ನಿ'' ಎಂದಿದ್ದಾಳೆ. ಅಷ್ಟು ಹೇಳುವವರೊಬ್ಬರು ಸಿಕ್ಕಿದ್ದು ನಮ್ಮ ಪುಣ್ಯ. ಆದರೆ ಅಲ್ಲಿಗೆ ತಲುಪಿಸುವುದೂ ಈಗ ಸಮಸ್ಯೆಯಾಗಿ ಹೋಗಿದೆ. ನಮ್ಮೂರಿನಿಂದ ಕುಂದಾಪುರಕ್ಕೆ ಒಂದು ದನ ಸಾಗಾಟ ಮಾಡುವುದು ಅಷ್ಟು ಕಷ್ಟ ಆಗಿದೆಯಾ? ನಾನು ಮಾಡಿಕೊಡುತ್ತೇನೆ ಎನ್ನುವವರು ಯಾರೂ ಇಲ್ಲವೇ?'' ಹತಾಶರಾಗಿ ಕೇಳಿದರು ಮೂರ್ತಿ.

''ನಿಮಗೆ ಹೇಗೆ ಹೇಳೋದು ಅಂತಲೇ ತಿಳಿಯುತ್ತಿಲ್ಲ ನನಗೆ. ಹೀಗೆ ತಿಳ್ಕೊಳ್ಳಿ. ಒಂದು ಏನೆಂದರೆ, ಗೋರಕ್ಷೆ ರಾಜಕೀಯಕ್ಕೆ ಸೇರಿಹೋಗಿದೆ. ಪಕ್ಷಗಳನ್ನೇ ನುಂಗಿಹಾಕಬಲ್ಲ ತಾಕತ್ತಿದೆ ಅದಕ್ಕೆ. ಇನ್ನೊಂದು ಜಾನುವಾರು ಕಳವು ಸಿಕ್ಕಾಪಟ್ಟೆ ಜಾಸ್ತಿಯಾಗಿದೆ. ಪರಿಸ್ಥಿತಿ ಯಾವ ಮಟ್ಟಕ್ಕೆ ಬಂದು ನಿಂತಿದೆಯೆಂದರೆ ವಾಹನಗಳಲ್ಲಿ ದನಕರುಗಳನ್ನು ಸಾಗಿಸುತ್ತಾರೆ ಎಂದರೆ ಕದ್ದು ಮಾರಿ ಕಸಾಯಿಗೆ ಕೊಂಡು ಹೋಗುತ್ತಿದ್ದಾರೆ ಎಂದೇ ವ್ಯಾಖ್ಯಾನ. ಹಿಂದೆ ದನಕರುಗಳನ್ನು ಕೊಟ್ಟಿಗೆಯಲ್ಲಿ ಕಟ್ಟುವುದು ಗಾಳಿ ಮಳೆ ಬಿಸಿಲುಗಳಿಂದ ರಕ್ಷಿಸುವುದಕ್ಕೆ. ಕಾಡುಮೃಗಗಳಿಂದ ರಕ್ಷಿಸುವುದಕ್ಕೆ. ಹಟ್ಟಿ ಕೊಟ್ಟಿಗೆಗಳಿಗೆ ಬೀಗ ಹಾಕುವ ಪರಿಪಾಠ ನಮ್ಮಲ್ಲಿ ಇರಲೇ ಇಲ್ಲ. ಜಾನುವಾರುಗಳನ್ನು ಹಗಲಲ್ಲಿ ಹಗ್ಗಬಿಚ್ಚಿ ಅಥವಾ ಉದ್ದಹಗ್ಗ ಕಟ್ಟಿ ಮೇಯಲು ಬಿಡುವುದು ಸರ್ವೇ ಸಾಮಾನ್ಯವಾಗಿತ್ತು. ಈಗ ಪರಿಸ್ಥಿತಿ ಬದಲಾಗಿ ಹೋಗಿದೆ. ಬೀಗವಿಲ್ಲದ ಕೊಟ್ಟಿಗೆಗಳಲ್ಲಿಯ ದನಗಳು, ಬಯಲಲ್ಲಿಯೇ ಮಲಗುವ ದನಗಳು, ರಸ್ತೆಬದಿಯಲ್ಲಿಯೇ ಓಡಾಡುವ ದನಗಳು ದನಗಳ್ಳರಿಗೆ ಸುಲಭ ಮಾಲು. ರಾತ್ರಿ ಟೆಂಪೋ ಅಥವಾ ಲಾರಿ ಚಲಾಯಿಸುತ್ತ ರಸ್ತೆಬದಿಯಲ್ಲಿ ಸಿಕ್ಕ ದನಕರುಗಳನ್ನು, ತೆರೆದ ಹಟ್ಟಿಗಳಲ್ಲಿ ಕಟ್ಟಿದ ದನಕರುಗಳನ್ನು ಟೆಂಪೋಗೆ ತುಂಬಿಸಿ ಕದ್ದೊಯ್ದು ಕಸಾಯಿಖಾನೆಗೆ ಮಾರಿ ಸಿಕ್ಕಿದ ಹಣದಲ್ಲಿ ವಿಲಾಸಿ ಜೀವನ ನಡೆಸುವ ಹುಡುಗರು ಬಹಳಷ್ಟಿದ್ದಾರೆ. ಹಗಲಲ್ಲಿ ಸುಬಗರ ಮುಖವಾಡ, ರಾತ್ರಿ ಹತ್ತಿರದ ಊರುಗಳ ದನಕರುಗಳ ಕಳ್ಳ ವ್ಯಾಪಾರ. ಈಗೆಲ್ಲ ಹಟ್ಟಿಯ ಬೀಗ ಮುರಿದು ಬಾಗಿಲು ಒಡೆದು ಜಾನುವಾರು ಕೊಂಡುಹೋದ ಪ್ರಕರಣಗಳು ದಾಖಲಾಗುತ್ತಿವೆ. ದನ ಕದ್ದು ಹೋಗಿರುವ ಬಗ್ಗೆ ಊರವರ ಗೋಳು ಎಲ್ಲೂ ಕೇಳಲೇ ಇಲ್ಲವಾ ನೀವು?'' ಪ್ರಶ್ನಿಸಿದ ಅಬ್ದುಲ್ಲ.

''ಕೇಳಿದ್ದೇನೆ'' ಒಪ್ಪಿಕೊಂಡರು ಮೂರ್ತಿ.

ಸಮಸ್ಯೆ ಎಷ್ಟು ದೊಡ್ಡದಾಗಿದೆಯೆಂದರೆ ಜನ ರಾತ್ರೆ ಹಗಲು ಗಸ್ತು ತಿರುಗುವ ತಂಡಗಳನ್ನು ಕಟ್ಟಿಕೊಂಡಿದ್ದಾರೆ. ಜಾನುವಾರು ತುಂಬಿದ ಟೆಂಪೊ ಕಂಡರೆ ಸಾಕು, ನಿಲ್ಲಿಸಿ ಯಾವ ವಿಚಾರಣೆಯನ್ನೂ ಮಾಡದೆ ಒಳಗೆ ಇದ್ದವರಿಗೆ ಬೆನ್ನುಮೂಳೆ ಮುರಿಯುವಂತೆ ಹೊಡೆಯುತ್ತಾರೆ. ಊರ ಹಿರಿಯರೂ ಪೊಲೀಸರೂ ಸರಕಾರವೂ ಮೌನ ವಹಿಸಿದ ಆರೋಪಗಳೂ ಕೇಳಿಬಂದಿವೆ. ಸಮಸ್ಯೆ ಜಾತಿವಾಸನೆ ಹಿಡಿದು ಎರಡು ರಾಜಕೀಯ ಪಕ್ಷಗಳ ಮರಿ ಲೀಡರುಗಳ ಕೈಗೆ ಸಿಕ್ಕಿದ ಮೇಲಂತೂ ಅಡ್ಡಾತಿಡ್ಡಿ ಬೆಳೆದು